## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ನೌಕರರು ಪಡೆದ ಹೆಚ್.ಡಿ.ಎಫ್.ಸಿ., ಗೃಹ ಖರೀದಿ ಮುಂಗಡದ ಮೇಲಿನ ಹೆಚ್ಚುವರಿಯಾಗಿ ಪಾವತಿಸಿರುವ ಬಡ್ಡಿ ಹಣವನ್ನು ಮರುಪಾವತಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂ. ಎಫ್‌ಡಿ 95 ಎಹೆಚ್‌ಬಿ 89, ದಿನಾಂಕ: 26.07.1989.
2. ಅಧಿಕೃತ ಜ್ಞಾಪನ ಸಂ. ಎಫ್‌ಡಿ 95 ಎಹೆಚ್‌ಬಿ 89, ದಿನಾಂಕ: 11.09.1989.

ಪ್ರಸ್ತಾವನೆ:

ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹೆಚ್.ಡಿ.ಎಫ್.ಸಿ., ಸಂಸ್ಥೆಯ ಮೂಲಕ ಸರ್ಕಾರಿ ನೌಕರರಿಗೆ ಗೃಹ ಖರೀದಿ/ನಿರ್ಮಾಣ ಮುಂಗಡವನ್ನು ಮಂಜೂರು ಮಾಡಲು ಆದೇಶ ಹೊರಡಿಸಲಾಗಿದೆ. ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ಅಧಿಕೃತ ಜ್ಞಾಪನದಲ್ಲಿ ಹೆಚ್.ಡಿ.ಎಫ್.ಸಿ. ಸಂಸ್ಥೆಯ ಮೂಲಕ ಮಂಜೂರು ಮಾಡಲಾದ ಗೃಹ ಖರೀದಿ/ನಿರ್ಮಾಣ ಮುಂಗಡದ ಮರುಪಾವತಿ ಕಾರ್ಯವಿಧಾನವನ್ನು ತಿಳಿಸಲಾಗಿದೆ. ಅಲ್ಲದೇ ಖಜಾನೆ ನಿರ್ದೇಶಕರನ್ನು, ಬಡ್ಡಿ ಮೊತ್ತ ಸೇರಿದಂತೆ ಸಂಪೂರ್ಣ ಮುಂಗಡ ಮೊತ್ತದ ಮರುಪಾವತಿ ಕಂತುಗಳನ್ನು ನಿಯಮಿತವಾಗಿ ಹೆಚ್.ಡಿ.ಎಫ್.ಸಿ. ಸಂಸ್ಥೆಗೆ ಪಾವತಿಸುವ ಕಾರ್ಯವಿಧಾನದ, ಉಸ್ತುವಾರಿ ಮತ್ತು ಲೆಕ್ಕವಿಡುವ ಪ್ರಾಧಿಕಾರವೆಂದು ನೇಮಿಸಲಾಗಿದೆ. ಯಾವುದೇ ಸರ್ಕಾರಿ ನೌಕರ ರಾಜ್ಯ ಸರ್ಕಾರದಿಂದ, ಹೆಚ್.ಡಿ.ಎಫ್.ಸಿ. ಸಂಸ್ಥೆಯ ಮೂಲಕ, ಗೃಹ ಖರೀದಿ/ನಿರ್ಮಾಣ ಮುಂಗಡವನ್ನು ಪಡೆಯಲು ಉದ್ದೇಶಿಸಿದಲ್ಲಿ ಮುಂಗಡ ಮಂಜೂರಾತಿ ಆದೇಶವನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರೇ ಹೊರಡಿಸುತ್ತಾರೆ.

ಕೆಲವೊಂದು ಸಂದರ್ಭಗಳಲ್ಲಿ ನಿಗದಿತ ಮುಂಗಡ ಮೊತ್ತ ಅಥವಾ ಬಡ್ಡಿ ಮೊತ್ತಕ್ಕಿಂತಲೂ ಹೆಚ್ಚಿನ ಮೊತ್ತವನ್ನು ಸರ್ಕಾರಕ್ಕೆ ಮರುಪಾವತಿಸಿರುವುದರಿಂದ ಹೆಚ್ಚುವರಿಯಾಗಿ ಪಾವತಿಸಿದಂತಹ ಮೊತ್ತವನ್ನು ಮರುಪಾವತಿಸುವಂತೆ ಮುಂಗಡದಾರರು ಖಜಾನೆ ನಿರ್ದೇಶಕರಿಗೆ ಕೋರಿಕೆಯನ್ನು ಸಲ್ಲಿಸುತ್ತಾರೆ. ಇಂತಹ ಕೋರಿಕೆಗಳನ್ನು ಪರಿಶೀಲಿಸಿ, ಖಜಾನೆ ನಿರ್ದೇಶಕರು ಹೆಚ್ಚುವರಿ ಮುಂಗಡದ ಮೊತ್ತ ಅಥವಾ ಬಡ್ಡಿ ಮೊತ್ತ ಪಾವತಿಸಿರುವುದನ್ನು ಖಚಿತಪಡಿಸಿಕೊಂಡು, ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲು ಅನುಮತಿ ನೀಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸುತ್ತಿರುವ ಪ್ರಕರಣಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವುದನ್ನು ಸರ್ಕಾರ ಗಮನಿಸಿದೆ.

ಈಗಾಗಲೇ ಮೇಲೆ ಕ್ರ.ಸಂ (2)ರಲ್ಲಿ ಓದಲಾದ ಅಧಿಕೃತ ಜ್ಞಾಪನದಲ್ಲಿ ಖಜಾನೆ ನಿರ್ದೇಶಕರನ್ನು ಮುಂಗಡ ಮರುಪಾವತಿ ಕಂತುಗಳನ್ನು ನಿಯಮಿತವಾಗಿ ಹೆಚ್.ಡಿ.ಎಫ್.ಸಿ., ಸಂಸ್ಥೆಗೆ ಪಾವತಿಸುವ ಕಾರ್ಯವಿಧಾನದ ಉಸ್ತುವಾರಿ ಮತ್ತು ಲೆಕ್ಕವಿಡುವ ಪ್ರಾಧಿಕಾರವೆಂದು ನೇಮಿಸಲಾಗಿರುವುದರಿಂದ, ಇನ್ನು ಮುಂದೆ ಮುಂಗಡದಾರರು ಗೃಹ ಮುಂಗಡದ ಮೊತ್ತ ಅಥವಾ ಬಡ್ಡಿ ಮೊತ್ತವನ್ನು ಸರ್ಕಾರಕ್ಕೆ ಹೆಚ್ಚುವರಿಯಾಗಿ ಪಾವತಿಸಿದ ಸಂದರ್ಭಗಳಲ್ಲಿ ಹೆಚ್ಚುವರಿ ಮೊತ್ತವನ್ನು, ಸೂಕ್ತ ಲೆಕ್ಕ ಪರಿಶೀಲನೆ ನಂತರ, ಮುಂಗಡದಾರರಿಗೆ ಮರುಪಾವತಿಸುವ ಬಗ್ಗೆ ಆರ್ಥಿಕ

ಇಲಾಖೆಯ ಅನುಮತಿ ಪಡೆಯದೇ ತಮ್ಮ ಹಂತದಲ್ಲಿಯೇ ಸೂಕ್ತ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಖಜಾನೆ ನಿರ್ದೇಶಕರಿಗೆ ನೀಡುವುದು ಸಮಂಜಸವೆಂದು ಸರ್ಕಾರ ತೀರ್ಮಾನಿಸಿದೆ. ಅದರಂತೆ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 18 ಮಕಮು 2010, ಬೆಂಗಳೂರು, ದಿನಾಂಕ: 22ನೇ ಡಿಸೆಂಬರ್, 2010.**

ಸರ್ಕಾರಿ ನೌಕರರು ರಾಜ್ಯ ಸರ್ಕಾರದಿಂದ ಹೆಚ್.ಡಿ.ಎಫ್.ಸಿ., ಸಂಸ್ಥೆಯ ಮೂಲಕ ಪಡೆದಿರುವ ಗೃಹ ಖರೀದಿ/ನಿರ್ಮಾಣ ಮುಂಗಡದ ಮೊತ್ತ ಅಥವಾ ಬಡ್ಡಿ ಮೊತ್ತವನ್ನು ಹೆಚ್ಚುವರಿಯಾಗಿ ಪಾವತಿಸಿದ ಸಂದರ್ಭಗಳಲ್ಲಿ ಹೆಚ್ಚುವರಿ ಮೊತ್ತವನ್ನು, ಸೂಕ್ತ ಲೆಕ್ಕ ಪರಿಶೀಲನೆ ನಂತರ, ಮುಂಗಡದಾರರಿಗೆ ಮರುಪಾವತಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಖಜಾನೆ ಇಲಾಖೆಯ ನಿರ್ದೇಶಕರನ್ನು ಸಕ್ಷಮ ಪ್ರಾಧಿಕಾರವೆಂದು ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎನ್. ಶ್ರೀನಿವಾಸ ಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಮತ್ತು 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ (ಮುಂಗಡಗಳು) ಕಳುಹಿಸಿಕೊಡಲು ಕೋರಿದೆ.

ಪ್ರತಿಯನ್ನು:
1. ಮಹಾಲೇಖಪಾಲರು (ಲೆಕ್ಕಪತ್ರ & ತನಿಖೆ), ಕರ್ನಾಟಕ, ಬೆಂಗಳೂರು,
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
3. ಅಪರ ಮುಖ್ಯ ಕಾರ್ಯದರ್ಶಿಗಳು, ಅಮುಕಾ ಮತ್ತು ಅಭಿವೃದ್ಧಿ ಆಯುಕ್ತರು,
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,
5. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು.
6. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು,
7. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕೋರಮಂಗಲ, ಬೆಂಗಳೂರು,
8. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು,
9. ಕಾರ್ಯದರ್ಶಿಗಳು, ರಾಜಭವನ; ಬೆಂಗಳೂರು,
10. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
11. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು,
12. ಎಲ್ಲಾ ಇಲಾಖಾ ಮುಖ್ಯಸ್ಥರು,
13. ಎಲ್ಲಾ ಜಿಲ್ಲಾಧಿಕಾರಿಗಳು,
14. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
15. ಕಛೇರಿಪ್ರತಿ/ ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.